ನೀವು ತರಿಸಿನೋಡಿ ಎಂದು ಹೇಳಿದರು. ವಿರೋಧ ಪಕ್ಷದ ನಾಯಕರು ಇದನ್ನು ಮಾನವೀಯತೆ ಆಧಾರದ ಮೇಲೆ ನೋಡಬೇಕಾಗುತ್ತದೆ, ಸುಪ್ರೀಂ ಕೋರ್ಟ್‌ನವರು ಏನು ಡೈರೆಕ್ಷನ್ ಕೊಡುತ್ತಾರೆ ಅಥವಾ ಏನು ತೀರ್ಮಾನ ಆಗುತ್ತದೆ ಈ ಕೇಸು ಎಂಬುದನ್ನು ಅವಲಂಬಿಸದೆ ಈ ಕ್ಯಾಬಿನೆಟ್ ಸಬ್ ಕಮಿಟಿ ಏನು ನಾವು constitute ಮಾಡಿದ್ದೇವೆ ಅವರು ಇದರ ಬಗ್ಗೆ ತಮ್ಮ ಗಮನಹರಿಸಿ once and for all ಇದನ್ನು dispose ಮಾಡಬೇಕು ಎಂಬ ತಮ್ಮ ಏನು ಸಲಹೆ ಇದೆ ಆ ಸಲಹೆಯನ್ನು ಅಂಗೀಕರಿಸುತ್ತೇನೆ. ಆ ಕ್ಯಾಬಿನೆಟ್ ಸಬ್ ಕಮಿಟಿಯವರಿಗೆ ಆದಷ್ಟು ಬೇಗ.....

ಅಧ್ಯಕ್ಷರು :- ಮುಂದಿನ ಪ್ರಶ್ನೆ.

ನಾಗಮಂಗಲ ತಾಲ್ಲೂಕಿನಲ್ಲಿ ಜಲ ಸಂವರ್ಧನಾ ಯೋಜನೆ

105(812) ಶ್ರೀ ಎನ್. ಚಲುವರಾಯಸ್ವಾಮಿ. (ನಾಗಮಂಗಲ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರದ ಜಲ ಸಂವರ್ಧನಾ ಯೋಜನೆಯಡಿಯಲ್ಲಿ ಕೆರೆಯಲ್ಲಿ ಹೂಳೆತ್ತುವ ಕೆಲಸ ಮಂಡ್ಯ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಪ್ರಾರಂಭವಾಗಿದೆ.

ಆ) ನಾಗಮಂಗಲ ತಾಲ್ಲೂಕಿನಲ್ಲಿ ಈ ಯೋಜನೆ ಅಡಿಯಲ್ಲಿ ಕೆರೆಯ ಹೂಳೆತ್ತುವ ಕೆಲಸ ಪ್ರಾರಂಭಿಸಲು ಇಲಾಖೆಯಿಂದ ಗುರುತಿಸಲಾಗಿದೆಯೇ;

ಇ) ಗುರುತಿಸಿದ್ದರೆ, ಯಾವಾಗ ಕೆಲಸ ಪ್ರಾರಂಭ ಮಾಡಲಾಗುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ) ಸಚಿವರು

ಅ) ಈ ಯೋಜನೆಯಡಿ ಮಂಡ್ಯ ಜಿಲ್ಲೆಯು ಸೇರಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ :- ಮಾನ್ಯ ಅಧ್ಯಕ್ಷರೇ, ಸರ್ಕಾರದ ಜನಸಂವರ್ಧನ ಯೋಜನೆಯಡಿ ಮಂಡ್ಯ ಜಿಲ್ಲೆಯಲ್ಲಿ ಯಾವ ಕೆರೆಯನ್ನೂ ಹೂಳೆತ್ತುವ ಕೆಲಸಕ್ಕೆ ತೆಗೆದುಕೊಂಡಿಲ್ಲವೆಂದು ಸ್ಪಷ್ಟವಾಗಿ ಉತ್ತರದಲ್ಲಿ ಹೇಳಿದ್ದಾರೆ. ಆದರೆ ನಾನು ಕೇಳುತ್ತಾ ಇರುವುದು ಮಂಡ್ಯ ಜಿಲ್ಲೆಯನ್ನು ನೀವು ಅಷ್ಟೊಂದು ನಿಷ್ಕೃಷ್ಟವಾಗಿ ನೋಡುವುದು ಯಾಕೆ? ಮಂಡ್ಯ ಜಿಲ್ಲೆಯಲ್ಲೂ ಕೆರೆಗಳು ಸಾಕಷ್ಟಿದ್ದು ಇವತ್ತಿನ ಕೆಆರ್‌ಎಸ್ ಪರಿಸ್ಥಿತಿ ನೋಡಿದ್ದೀರಿ, ಅದರಲ್ಲೂ ಹೇಮಾವತಿ ನಮಗೆ ಇರುವಂತಹುದು, ಹೇಮಾವತೀದು ಡ್ರೈಲ್ಯಾಂಡ್ ಇರುವುದರಿಂದ ಯಾವುದೇ ನೀರು ಸರಿಯಾದ ರೀತಿ ಬರುತ್ತಾ ಇಲ್ಲ. ಕೆರೆಯನ್ನೇ ನಾವು ಅವಲಂಬಿಸುವ ಸನ್ನಿವೇಶ ಇರುವುದರಿಂದ ಆ ಇಲಾಖೆಯಿಂದ ಇಲ್ಲಿಯವರೆಗೆ ಒಂದು ಬಾರಿಯೂ ಹೂಳೆತ್ತುವುದು ಆಗಿಲ್ಲ. ದಯಮಾಡಿ ಈ ಯೋಜನೆಯಡಿ ನನ್ನ ತಾಲ್ಲೂಕಿನಲ್ಲಿ ಹೋಬಳಿಗೊಂದು ಕೆರೆಯನ್ನು ಮಾಡಲಿಕ್ಕೆ ತಾವಿವತ್ತು ಆಶ್ವಾಸನೆ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು, ಮಾನ್ಯ ಗೃಹ ಹಾಗೂ ಸಣ್ಣ ನೀರಾವರಿ ಸಚಿವರ ಪರವಾಗಿ) :- ಅಧ್ಯಕ್ಷರೇ ಈ ಸಾಂಪ್ರದಾಯಿಕ ಕೆರೆಗಳನ್ನು ಅಭಿವೃದ್ಧಿಪಡಿಸುವಂತಹುದು ಸಮಾಜದ ಸಮುದಾಯದ ಸಹಭಾಗಿತ್ವದಲ್ಲಿ ಎತ್ತಿಕೊಂಡುಂಥಾದ್ದು, ಎಲ್ಲಾ ಕಾರ್ಯಕ್ರಮವನ್ನೂ ಎಲ್ಲಾ ಜಿಲ್ಲೆಗೂ ವಿಸ್ತರಿಸುವುದಕ್ಕೆ ಆಗುವುದಿಲ್ಲ. ಈಗ ಸಧ್ಯಕ್ಕೆ 9

ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಆಯ್ಕೆ ಮಾಡಿಕೊಳ್ಳುವುದಕ್ಕೆ ಬಡತನದ ರೇಖೆಗಿಂತ ಕೆಳಗಿರುವ ಶೇಕಡವಾರು ಜನಸಂಖ್ಯೆ ಎಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರು ಎಷ್ಟಿದ್ದಾರೆ, ಭೂರಹಿತ ಸಣ್ಣ ಹಿಡುವಳಿದಾರರು ಎಷ್ಟು, ಹಾಗೂ ಮಹಿಳಾ ಸಾಕ್ಷರತೆ, ಕೆರೆಗಳ ಸಾಂದ್ರತೆ - ಇವುಗಳನ್ನೆಲ್ಲಾ ಲೆಕ್ಕಾಚಾರ ಹಾಕಿ 9 ಜಿಲ್ಲೆಗಳನ್ನು ಈಗ ತೆಗೆದುಕೊಂಡಿದ್ದೇವೆ. ಅವರ ಸಲಹೆ ಒಳ್ಳೆಯದೇ. ಆದರೆ ಎಲ್ಲಾ ಜಿಲ್ಲೆಯನ್ನೂ ಎಲ್ಲದಕ್ಕೂ ತೆಗೆದುಕೊಳ್ಳಲು ಆಗುವುದಿಲ್ಲ. ಸ್ವಲ್ಪ ಮಣ್ಣಿನ ಗುಣಲಕ್ಷಣಗಳನ್ನು ನೋಡಿ ಕೆಲವು ಬಾರ್ಡರ್ ಜಿಲ್ಲೆಯಲ್ಲಿರುವ ಕೆರೆಗಳನ್ನು ಈಗ ಆಯ್ಕೆ ಮಾಡಿಕೊಳ್ಳಲಾಗಿದೆ. ಅವರ ಸಲಹೆಯನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ :- ಅಧ್ಯಕ್ಷರೇ, ಆ ಯೋಜನೆ ಬೇಡ ಇಲಾಖೆ ವತಿಯಿಂದಲಾದರೂ ತೆಗೆಸಲು ತಾವು ದಯಮಾಡಿ ತಾವು ಆದೇಶ ಕೊಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ :- ಸ್ಪೆಸಿಫಿಕ್ಕಾಗಿ ಕೆಲವು ಕೆರೆಗಳನ್ನು ಕೊಟ್ಟರೆ ಅದನ್ನು ಯೋಚನೆ ಮಾಡುತ್ತೇವೆ.

ಸವಣೂರು ತಾಲ್ಲೂಕಿನಲ್ಲಿ ಅಗ್ನಿಶಾಮಕ ಠಾಣೆ ಮಂಜೂರು ಮಾಡುವುದು

107(781) ಶ್ರೀ ಖಾದ್ರಿ ಎಸ್.ಎಸ್. (ಶಿಗ್ಗಾಂವ್) ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿಗ್ಗಾಂವ್ ಸವಣೂರು ತಾಲ್ಲೂಕುಗಳಲ್ಲಿ ಅಗ್ನಿಶಾಮಕ ಠಾಣೆ ಮಂಜೂರಾಗಿದೆಯೇ?

ಆ) ಆಗದಿದ್ದಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆಯಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ) ಶಿಗ್ಗಾಂವಿ ಪಟ್ಟಣಕ್ಕೆ ಅಗ್ನಿಶಾಮಕ ಠಾಣೆಯನ್ನು ಸರ್ಕಾರದ ಆದೇಶ ಸಂಖ್ಯೆ: ಒಇ 53 ಕಅಸೇ 93, ದಿನಾಂಕ: 22.12.93ರಲ್ಲಿ ಈಗಾಗಲೇ ಮಂಜೂರು ಮಾಡಲಾಗಿದೆ. ಆದರೆ ಸವಣೂರು ತಾಲ್ಲೂಕಿಗೆ ಅಗ್ನಿಶಾಮಕ ಠಾಣೆಯನ್ನು ಮಂಜೂರು ಮಾಡಿರುವುದಿಲ್ಲ.

ಆ) ಶಿಗ್ಗಾಂವಿಯಲ್ಲಿ ಅಗ್ನಿಶಾಮಕ ಠಾಣೆ ಪ್ರಾರಂಭಿಸಲು ಮೂಲಭೂತ ಸೌಲಭ್ಯಗಳ ಅಗತ್ಯವಿರುತ್ತದೆ. ಎ.ಪಿ.ಎಂ.ಸಿ. ಯವರು ಉಚಿತವಾಗಿ 1 ರಿಂದ 1.20 ಎಕರೆ ನಿವೇಶನವನ್ನು ನೀಡುವುದಾಗಿ ಭರವಸೆ ನೀಡಿರುತ್ತಾರೆ. ಇವರಿಂದ ನಿವೇಶನ ದೊರಕಿದ ನಂತರ ಬೇಕಾದ ಮೂಲಭೂತ ಸೌಲಭ್ಯ ಕಲ್ಪಿಸಿ ಅಗ್ನಿಶಾಮಕ ಠಾಣೆ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಈಗಾಗಲೇ ರಾಜ್ಯದಲ್ಲಿ ಮಂಜೂರಾಗಿ ಪ್ರಾರಂಭವಾಗದೆ ಇರುವ 31 ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭಿಸಿದ ನಂತರ ಸವಣೂರು ತಾಲ್ಲೂಕಿನಲ್ಲಿ ಅಗ್ನಿಶಾಮಕ ಠಾಣೆಯನ್ನು ಮಂಜೂರು ಮಾಡಲು ಪರಿಶೀಲಿಸಲಾಗುವುದು.

ಶ್ರೀ ಎಸ್.ಎಸ್. ಖಾದ್ರಿ :- ಅಧ್ಯಕ್ಷರೇ, ಉತ್ತರದಲ್ಲಿ ಶಿಗ್ಗಾಂವ್ ಪಟ್ಟಣಕ್ಕೆ ಅಗ್ನಿಶಾಮಕ ಠಾಣೆ ಮಂಜೂರು ಮಾಡಲಾಗಿದೆ ಎಂದು ಹೇಳಿದ್ದಾರೆ. ಅದು ಸ್ವಾಗತಾರ್ಹ. ಆದರೆ ಶಿಗ್ಗಾಂವ್ ಕ್ಷೇತ್ರದಲ್ಲಿ ಎರಡು ತಾಲ್ಲೂಕು ಬರುವುದರಿಂದ ಇವತ್ತು ಬಹಳ ಮುಖ್ಯವಾಗಿ ಹೇಳಬೇಕು ಅಂದರೆ ಅಲ್ಲಿ ರೈತರಿಗೆ ತೀರಾ ಸಮಸ್ಯೆ ಆಗುತ್ತಾ ಇದೆ. ನಮ್ಮ ಕ್ಷೇತ್ರಕ್ಕೆ ಸುಮಾರು 50-60 ಕಿಮೀ ದೂರದಲ್ಲಿ ಅಗ್ನಿಶಾಮಕ ದಳ ಇದೆ. ಇವತ್ತು ಇಂತಹ ಬರಗಾಲ ಪರಿಸ್ಥಿತಿಯಲ್ಲಿ ಕುಡಿಯುವುದಕ್ಕೆ ನೀರಿನ ಸಮಸ್ಯೆ ಇರುವ ಸಂದರ್ಭದಲ್ಲಿ ರೈತರು ದೂರದೂರದಿಂದ ಮೇವನ್ನು ಖರೀದಿ ಮಾಡಿ